# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 11.03.2011**

ನಗರಾದ್ಯಂತ ಸ್ವಚ್ಛತೆ ಕಾಪಾಡುವ ಮತ್ತು ನಗರದ ಸೌಂದರ್ಯ ಹೆಚ್ಚಿಸುವ ದೃಷ್ಟಿಯಿಂದ ದಿನಾಂಕ 19ನೇ ಮಾರ್ಚ್ ಶನಿವಾರದಂದು ರಾತ್ರಿ 10.00 ಗಂಟೆಯಿಂದ ಬೆಳಗಿನ ಜಾವ 4.00 ಗಂಟೆಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 60 ಉಪ ವಿಭಾಗಗಳಲ್ಲಿ ತೀವ್ರವಾದ ಸ್ವಚ್ಛತೆ ಕಾರ್ಯಾಚರಣೆ ಹಮ್ಮಿಕೊಳ್ಳಲಾಗುವುದು. ಈ ಕಾರ್ಯಾಚರಣೆಯಲ್ಲಿ ಪ್ರತಿಯೊಂದು ವಾರ್ಡಿಗೆ ಒದಗಿಸಲಾದ ಟ್ರಾಕ್ಟರ್ ಮತ್ತು ಕಾರ್ಮಿಕರುಗಳು, ಆರೋಗ್ಯ, ತೋಟಗಾರಿಕೆ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಬಳಸಿಕೊಂಡು ರಸ್ತೆಬದಿ ಹಾಕಲಾದ ಮಣ್ಣು ಮತ್ತು ಕಲ್ಲಿನ ರಾಶಿ, ಪಾದಚಾರಿ ಮಾರ್ಗದ ಒತ್ತುವರಿ, ಸೊಳ್ಳೆ ಉತ್ಪತ್ತಿಯಾಗುವ ಸ್ಥಳಗಳಲ್ಲಿ ಔಷಧಿ ಸಿಂಪಡಿಸುವುದು, ಮರಗಳ ಒಣಗಿದ ಅಪಾಯಕಾರಿ ಟೊಂಗೆಗಳ ತೆರವು ಮುಂತಾದ ಕಾರ್ಯಗಳನ್ನು ನಿರ್ವಹಿಸಲಾಗುವುದೆಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದ್ದಾರೆ.

ಪಾಲಿಕೆ ಆಯುಕ್ತರು ಇಂದು ಬೆಳಿಗ್ಗೆ 6.30 ಗಂಟೆಯಿಂದ ರಾಜಾಜಿನಗರ, ಪ್ರಕಾಶನಗರ, ಮಂಜುನಾಥನಗರ, ಮಲ್ಲೇಶ್ವರಂ, ಕುರುಬರಹಳ್ಳಿ, ಶ್ರೀರಾಮಮಂದಿರ, ಮುಂತಾದ ಪ್ರದೇಶಗಳಲ್ಲಿ ತಪಾಸಣೆ ಕೈಗೊಂಡು, ವಾರ್ಡ್ ನಂ.98ರಲ್ಲಿರುವ ಗಾಯತ್ರಿದೇವಿ ಪಾರ್ಕ್‌ಗೆ ಭೇಟಿ ನೀಡಿ, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಪ್ರತಿನಿತ್ಯ ಸಾವಿರಾರು ಜನ ಓಡಾಡುವಂತಹ ವಿಶಾಲವಾದ ಪಾರ್ಕ್ ಅತಿ ಉತ್ತಮವಾಗಿ ನಿರ್ವಹಿಸಬೇಕು. ಪಾದಚಾರಿ ಮಾರ್ಗದ ದುರಸ್ಥಿ, ಬೆಳಕಿನ ವ್ಯವಸ್ಥೆ, ನಿರಂತರ ಸ್ವಚ್ಛತೆ, ಮಳೆನೀರು ಸಂಗ್ರಹಣೆ, ಸಾವಯವ ಗೊಬ್ಬರ ಘಟಕ ಮುಂತಾದವುಗಳ ಕೆಲಸಗಳನ್ನು ಕೂಡಲೇ ಪ್ರಾರಂಭಿಸಲು ತೋಟಗಾರಿಕೆ ಅಧೀಕ್ಷಕರಿಗೆ ಸೂಚನೆ ನೀಡಿದರು.

ರಾಜಾಜಿನಗರ 2ನೇ ಬ್ಲಾಕ್‌ನಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉದ್ಯಾನವನಕ್ಕೆ ಭೇಟಿ ನೀಡಿ, ಟ್ರೀಪಾರ್ಕ್, ಮಕ್ಕಳ ಆಟಿಕೆ ಉಪಕರಣಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದನ್ನು ಗಮನಿಸಿದ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು. ಒಂದು ವಾರದ ಒಳಗಾಗಿ ಇದನ್ನು ಸರಿಪಡಿಸಿ ವರದಿ ನೀಡಲು ಸೂಚಿಸಿದರು. ತಪ್ಪಿದ್ದಲ್ಲಿ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.

ಸುಬ್ರಮಣ್ಯನಗರದ ಮಿಲ್ಕ್ ಕಾಲೋನಿಯಲ್ಲಿ ಆಟದ ಮೈದಾನದ ತಪಾಸಣೆ ಕೈಗೊಂಡರು. 12 ಎಕರೆ ಪ್ರದೇಶದಲ್ಲಿ ಈ ಆಟದ ಮಾಲೀಕತ್ವ ವಿವಾದ ಕುರಿತು ಸುಪ್ರಿಂ ಕೋರ್ಟ್‌ನಲ್ಲಿ ಕೇಸ್ ಇರುವುದರಿಂದ ಅಭಿವೃದ್ಧಿಪಡಿಸಲಾಗಲಿಲ್ಲ. ಇತ್ತೀಚೆಗೆ ಸರ್ವೋಚ್ಛ ನ್ಯಾಯಾಲಯ ಪಾಲಿಕೆ ಪರವಾಗಿ ತೀರ್ಪು ನೀಡಿದ್ದು, ಅದನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇಲ್ಲಿ ವಿಶಾಲವಾದ ಜಾಗವಿರುವುದರಿಂದ ಸುತ್ತಲು ಮರಗಳನ್ನು ಬೆಳೆಸಲು ಬಫರ್‌ಝೋನ್ ಮಾಡಿ ಮರಗಳಿಗಾಗಿ ಪ್ರತ್ಯೇಕ ಸ್ಥಳ ಕಾಯ್ದಿರಿಸಿ, ಸುತ್ತಲು ತಂತಿಬೇಲಿ ನಿರ್ಮಿಸಿ, ಕಡ್ಡಾಯವಾಗಿ ಮಳೆನೀರು ಸಂಗ್ರಹಣೆ ಘಟಕ ಸ್ಥಾಪಿಸಲು ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು. ಈ ಸ್ಥಳವನ್ನು ಅತ್ಯುತ್ತಮ ಆಟದ ಮೈದಾನವನ್ನಾಗಿ ಪರಿವರ್ತಿಸಲು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 11.03.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿ ಲಕ್ಷಾಂತರ ಮರಗಳಿದ್ದು, ಮರದ ಬುಡಗಳಿಗೆ ನೀರು ಸರಾಗವಾಗಿ ಹರಿಯದೆ ಮರದ ಬೇರುಗಳು ಒಣಗಿ ಹೋಗುತ್ತಿದ್ದರಿಂದ, ಜೋರಾಗಿ ಮಳೆ ಗಾಳಿ ಬರುವ ವೇಳೆಯಲ್ಲಿ ಮರಗಳು ಬಿದ್ದು, ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಅನಾನುಕೂಲವಾಗುತ್ತಿತ್ತು ಹಾಗೂ ಪರಿಸರಕ್ಕೆ ಹಾನಿಯುಂಟಾಗುತ್ತಿತ್ತು. ಆದ್ದರಿಂದ ಪಾಲಿಕೆ ಆಯುಕ್ತರು ಈ ಮರಗಳಿಗೆ ನೀರು ಸರಾಗವಾಗಿ ಹರಿದು ಹೋಗುವ ರೀತಿಯಲ್ಲಿ ಕಾಮಗಾರಿ ನಿರ್ವಹಿಸಲು ಆದೇಶಿಸಿದ ಮೇರೆಗೆ ಮರಗಳ ಸುತ್ತ ಮಣ್ಣನ್ನು ಅಗೆದು ಫುಟ್‌ಪಾತ್ ಮಟ್ಟಕ್ಕೆ ತಡೆಗೋಡೆ ನಿರ್ಮಿಸಿ, ಮಳೆಗಾಲದಲ್ಲಿ ಬರುವ ಸುತ್ತಮುತ್ತಲಿನ ನೀರು ಸರಾಗವಾಗಿ ಹರಿದು ಮರದ ಬುಡದಲ್ಲಿ ಶೇಖರಿಸುವ ರೀತಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿರುತ್ತದೆ. ಇದರಿಂದ ಮಳೆ ನೀರು ನೇರವಾಗಿ ಮಳೆ ನೀರು ಚರಂಡಿಗೆ ಹೋಗುವುದನ್ನು ತಪ್ಪಿಸಿದಂತಾಗಿ ಮಳೆ ನೀರು ಭೂಮಿಯಲ್ಲಿ ಉಳಿಯುವಂತಾಗುತ್ತದೆ.

ಈ ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ವಹಿಸಿದ್ದು, ಕೆಲವು ಸ್ಥಳೀಯ ಸ್ವಯಂ ಸೇವಕರುಗಳು ಈ ಕಾಮಗಾರಿಯನ್ನು ಸ್ವಇಚ್ಛೆಯಿಂದ ಅವರ ವೆಚ್ಚದಲ್ಲಿ ನಿರ್ಮಿಸಲು ಮುಂದೆ ಬಂದಿರುತ್ತಾರೆ.

ಇದರಲ್ಲಿ ಬುಲ್ ಟೆಂಪಲ್ ರಸ್ತೆಯಲ್ಲಿ ಸುಮಾರು 100 ಮರಗಳಿದ್ದು, ಈ ಮರಗಳಿಗೆ ಸುತ್ತಲು Brick on edge ಕಾಮಗಾರಿಯನ್ನು ನಿರ್ವಹಿಸಲು **"ಅಡಿಗಾಸ್ ಹೋಟೆಲ್"** ಸಮೂಹದವರು ಮುಂದೆ ಬಂದು ಈ ಕಾಮಗಾರಿಯನ್ನು ನಿರ್ವಹಿಸುತ್ತಿರುತ್ತಾರೆ ಎಂದು ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ) ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 11.03.2011**

## ***ದಕ್ಷಿಣ ವಲಯದಲ್ಲಿ ಪಾದಚಾರಿ ಮಾರ್ಗ ತೆರವು***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ದಕ್ಷಿಣ ವಲಯದ ಜಯನಗರ ವಾರ್ಡ್ ನಂ.153ರಲ್ಲಿ ದಿನಾಂಕ: 10.03.2011 ರಂದು ಸಿದ್ದಾಪುರ ಪೊಲೀಸ್ ಠಾಣೆ (ಭೈರಸಂದ್ರ 8ನೇ ಮುಖ್ಯರಸ್ತೆ) ರಸ್ತೆಯ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ತಳ್ಳುವ ಗಾಡಿಯಿಂದ ವ್ಯಾಪಾರ ವಹಿವಾಟು ಮಾಡುತ್ತಿರುವುದನ್ನು ಹೊಂಬೇಗೌಡನಗರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾರ್ಯಾಚರಣೆ ಮುಖಾಂತರ ತೆರವುಗೊಳಿಸಿ, ಪಾದಚಾರಿ ರಸ್ತೆಯನ್ನು ಸುಗಮಗೊಳಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ) ವಿಭಾಗರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**